ಜೊಲ್ಲೆ ಗ್ರೂಪ್
ವಾರ್ತಾ ಪತ್ರ
(ಖಾಸಗಿ ಸುತ್ತೋಲೆ ಸಲುವಾಗಿ ಮಾತ್ರ)
ಮಾರ್ಚ 2023–ಸಂಪುಟ–7 ಸಂಚಿಕೆ–04

# ದರ್ಪಣ

**ಸತ್ಕರಿಸುತ್ತಿರುವುದು**



ಬೆಳಗಾವಿ ನಗರದ ರೈಲ್ವೇ ನಿಲ್ದಾಣ, ಲೋಂಡಾ – ಘಟಪ್ರಭಾ ದ್ವಿಪಥ ರೈಲು ಮಾರ್ಗ ಲೋಕಾರ್ಪಣೆ, ಕಾರ್ಯಕ್ರಮದಲ್ಲಿ ಗೌರವಾನ್ವಿತ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರಿಗೆ ಮುಜರಾಯಿ, ಹಜ ಮತ್ತು ವಕ್ಫ್ ಇಲಾಖೆಯ ಸಚಿವರಾದ ಸೌ. ಶಶಿಕಲಾ ಜೊಲ್ಲೆಯವರು ಸತ್ಕರಿಸುತ್ತಿರುವ ದೃಶ್ಯ.

## ಇಡೀ ಕರ್ನಾಟಕದ ಪ್ರಗತಿಯ ಹೆಬ್ಬಯಕೆ ಹೊಂದಿರುವ

### ಜನಪ್ರಿಯ ಸಂಸದರಾದ ಶ್ರೀ. ಅಣ್ಣಾಸಾಹೇಬ ಜೊಲ್ಲೆ ಹಾಗೂ ಕರ್ನಾಟಕ ಸರ್ಕಾರದ ಸಚಿವರಾದ ಸೌ. ಶಶಿಕಲಾ ಜೊಲ್ಲೆ


ಸಹಕಾರಿ ಸಂಘ ಸಂಸ್ಥೆಗಳು ಎಂದರೆ ಜನಸಾಮಾನ್ಯರ ಜೀವನಾಡಿಗಳಿದ್ದಂತೆ, ಈ ಕ್ಷೇತ್ರದಲ್ಲಿ ಸ್ವಾರ್ಥ ಸ್ವಹಿತಾಸಕ್ತಿ ಬದಿಗೊತ್ತಿ ಅತ್ಯಂತ ಪ್ರಾಮಾಣಿಕತೆ, ದಕ್ಷತೆಯಿಂದ ದುಡಿದರೇ ಮಾತ್ರ ಸಂಘಸಂಸ್ಥೆಗಳು ಹೆಮ್ಮರವಾಗಿ ಬಾನೆತ್ತರ ಬೆಳೆಯಲು ಸಾಧ್ಯವೆಂಬ ಅತ್ಯುತ್ತಮ ತತ್ವಸಿದ್ಧಾಂತವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿರುವ ಜನಪ್ರಿಯ ಸಂಸದರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಹಾಗೂ ಕರ್ನಾಟಕ ಸರ್ಕಾರದ ಸಚಿವೆಯಾಗಿರುವ ಸೌ. ಶಶಿಕಲಾ ಜೊಲ್ಲೆಯವರು ಸುಮಾರು ಮೂರುವರೆ ದಶಕಗಳಿಂದ ಶಿಕ್ಷಣ ಮತ್ತು ಸಹಕಾರ ಕ್ಷೇತ್ರದ ಶ್ರೇಯೋಭಿವೃದ್ಧಿ ಹಾಗೂ ಸರ್ವತೋಮುಖ ವಿಕಾಸಕ್ಕಾಗಿ ಹಗುಲಿರುಳು ನಿರಂತರ ಶ್ರಮಿಸುತ್ತಿದ್ದಾರೆ. ತಮ್ಮ ತಂದೆ–ತಾಯಿಯ ಕನಸು ಸಾಕಾರಗೊಳಿಸುವ ಮೂಲಕ ಈ ಕ್ಷೇತ್ರಗಳ ಮೇರು ಶಕ್ತಿಯಾಗಿ ಹೊರಹೊಮ್ಮಿದ್ದಾರೆ. ನೂರಾರು ಸಂಘ ಸಂಸ್ಥೆಗಳು ಮತ್ತು ಸಾವಿರಾರು ಕಾರ್ಮಿಕರ ಕಲ್ಯಾಣಕ್ಕಾಗಿ ಸಂಸ್ಥೆಗಳನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಇವರಿರ್ವರ ಪಾತ್ರ ಹಿರಿದಾಗಿವೆ.

ಸಹಕಾರ ಕ್ಷೇತ್ರದಲ್ಲಿ ಪಾರದರ್ಶಕ ಸೇವೆಗೈಯುತ್ತಾ ದೀನ ದಲಿತರ ಆಶಾಕಿರಣ, ಬಡವರ ಬಂಧು ಮತ್ತು ಯುವಜನತೆಯ ಕಣ್ಮಣಿಗಳಾಗಿ ಅನೇಕ ಸಂಘ ಸಂಸ್ಥೆಗಳಿಗೆ ಮಾರ್ಗದರ್ಶಕರಾಗಿ ದಣಿವರಿಯದ ರೈತಪರ ಹೋರಾಟಗಾರರಾಗಿ ಇಡೀ ಕರ್ನಾಟಕದ ಪ್ರಗತಿಯ ಹೆಬ್ಬಯಕೆ ಹೊಂದಿರುವ ಇವರು ನಿಜವಾಗಿಯೂ ಸಹಕಾರ ಮಹರ್ಷಿಗಳಾಗಿದ್ದಾರೆ. ಅತ್ಯುತ್ತಮ ಮೌಲ್ಯಗಳನ್ನು ಅಂತರ್ಗತ ಮಾಡಿಕೊಂಡು ತಮ್ಮನ್ನು ನಂಬಿಬಂದವರಿಗೆಲ್ಲ ಅನ್ನದಾತ, ಆಶ್ರಯದಾತರಾಗಿ ನ್ಯಾಯಸಮ್ಮತ, ಸಮಯೋಚಿತ ನಿರ್ಧಾರ ಮತ್ತು ಚಿಂತನೆಗಳೊಂದಿಗೆ 'ಅಣ್ಣಾಜೀ ಮತ್ತು ವೈನಿಜೀ' ಯವರು ಸುಸಂಸ್ಕೃತ ಬದುಕು ಕಟ್ಟಿಕೊಂಡು ಸಮಾಜಕ್ಕೆ ಮಾದರಿಯಾಗಿದ್ದಾರೆ.

ಅನನ್ಯ ಕ್ರಿಯಾಶೀಲತೆ, ಅದಮ್ಯ ಉತ್ಸಾಹ, ಸದಾ ಲವಲವಿಕೆ, ನಿತ್ಯ ಸಮಾಜಮುಖಿ ಮತ್ತು ರಾಷ್ಟ್ರಮುಖಿ, ದಣಿವರಿಯದ ದುಡಿಮೆ ನಾವಿನ್ಯಪೂರ್ಣ ಚಿಂತನೆಗಳನ್ನು ಹಾಸುಹೊಕ್ಕಾಗಿಸಿಕೊಂಡು ಸಮಾನ ಮನಸ್ಕರೊಡನೆ ಬೆರೆತು ಸಮಾಜದಲ್ಲಿ ನಿರ್ಲಕ್ಷಕ್ಕೊಳಗಾದ ಕಟ್ಟಕಡೆಯ ವ್ಯಕ್ತಿಯ ಬದುಕನ್ನು ಹಸನುಗೊಳಿಸುವ 'ತಾಯಿಕರುಳಿನವರು' ಎಂದರೆ ಅತಿಶಯೋಕ್ತಿ ಯಾಗಲಾರದು.

**ಶ್ರೀ ಬೀರೇಶ್ವರ ಕೋ-ಆಪ್. ಕ್ರೆಡಿಟ್ ಸೊಸಾಯಟಿ ಲಿ., ಯಕ್ಸಂಬಾ (ಮಲ್ಟಿ-ಸ್ಟೇಟ)**

*ಕ್ರೀಯಾತ್ಮಕ ಹಾಗೂ ಪ್ರಗತಿಶೀಲ ಅರ್ಥವ್ಯವಸ್ಥೆ*




ಇಂತಹ ವಿಶಿಷ್ಟ ಹೃದಯ ವೈಶಾಲ್ಯತೆ ಹೊಂದಿದ ತಂದೆ–ತಾಯಿಗೆ ತಕ್ಕ ಮಕ್ಕಳಾಗಿ ಶ್ರೀ. ಜ್ಯೋತಿಪ್ರಸಾದ ಜೊಲ್ಲೆ ಹಾಗೂ ಕು. ಬಸವಪ್ರಸಾದ ಜೊಲ್ಲೆಯವರು ತಂದೆತಾಯಿಯ ವಿವಿಧ ಕ್ಷೇತ್ರಗಳ ಜವಾಬ್ದಾರಿಗಳನ್ನು ಅತ್ಯಂತ ಉತ್ತಮ ರೀತಿಯಿಂದ ನಿಭಾಯಿಸುತ್ತಿದ್ದಾರೆ. ಇವರಿರ್ವರ ಸಾಧನೆಗಳು, ಕಾರ್ಯಚಟುವಟಿಕೆಗಳು, ಜನಮುಖಿ ಮತ್ತು ಸಮಾಜಮುಖಿ ಕಾರ್ಯಗಳು ಜನ ಮೆಚ್ಚುಗೆಗೆ ಪಾತ್ರವಾಗಿವೆ. ತಮ್ಮ ಕುಟುಂಬದ ಆದರ್ಶಗಳನ್ನು ಸಮಾಜಕ್ಕೆ ಧಾರೆಯೆರೆಯುತ್ತಿರುವ ಜೊಲ್ಲೆ ಮನೆತನದ ಹೆಮ್ಮೆಯ ಸುಪುತ್ರರಾಗಿರುವುದು ನಮ್ಮೆಲ್ಲರಿಗೆ ಅತ್ಯಂತ ಸಂತಸದ ಸಂಗತಿಯಾಗಿದೆ.

'ನಾಯಕತ್ವ' ಎಂಬುವುದು ಪರಿಶ್ರಮದ ಫಲ. ಜವಾಬ್ದಾರಿ, ಬದ್ಧತೆ, ಬುದ್ಧಿ, ಧೈರ್ಯ, ಪ್ರಾಮಾಣಿಕತೆ, ನಿಷ್ಠೆ ಮತ್ತು ಛಲದಿಂದ ಮಾತ್ರ ಎಂಬುವುದನ್ನು ಸಾಬೀತುಪಡಿಸಿದ್ದಾರೆ. 'ಸರ್ವೇಜನ ಸುಖಿನೊಭವಂತು' ಎಂಬ ಪರಿಕಲ್ಪಣೆಯ ಅಡಿಯಲ್ಲಿ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ ಪ್ರಾಥಮಿಕ ಹಂತದಿಂದ ಸ್ನಾತಕ್ಕೋತ್ತರ ಹಂತದವರೆಗೆ ಶೈಕ್ಷಣಿಕ ಮೌಲ್ಯಗಳನ್ನು ಒದಗಿಸಿಕೊಡಲು ಗುಣಮಟ್ಟದ ಭೌತಿಕ ಸಂಪನ್ಮೂಲಗಳು ಮತ್ತು ಮಾನವ ಸಂಪನ್ಮೂಲಗಳನ್ನು ಕೊಡುಗೆಯಾಗಿ ನೀಡಿರುವುದು ಇವರ ಶಿಕ್ಷಣದ ಬಗೆಗಿನ ಅಪಾರ ಕಾಳಜಿಗೆ ಸತ್ಯನಿದರ್ಶನವಾಗಿದೆ. ಮಾಡಬೇಕಾದ ಯಾವುದೇ ಕಾರ್ಯಗಳನ್ನು ಛಲದಿಂದ ಮಾಡುವ ಮನೋಭಾವ, ನಿರಂತರ ಪರಿಶ್ರಮವನ್ನು ಮೈಗೂಡಿಸಿಕೊಂಡ ಬದುಕು ಇವರನ್ನು ಎತ್ತರೆತ್ತರಕ್ಕೆ ಕೊಂಡೊಯ್ಯುತ್ತಿದೆ.

ಶ್ರೀ ಜಗಜ್ಯೋತಿ ಬಸವಣ್ಣನವರ 'ಕಾಯಕವೇ ಕೈಲಾಸ' ಎಂಬ ತತ್ವದಲ್ಲಿ ಅಚಲ ನಂಬಿಕೆಯುಳ್ಳ ಜನಪ್ರಿಯ ಸಂಸದರಾದ ಶ್ರೀ. ಅಣ್ಣಾಸಾಹೇಬ ಜೊಲ್ಲೆ ಹಾಗೂ ಕರ್ನಾಟಕ ಸರ್ಕಾರದ ಸಚಿವರಾದ ಸೌ. ಶಶಿಕಲಾ ಜೊಲ್ಲೆಯವರು ಕಾಯಕಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿ ವಿವಿಧ ಕ್ಷೇತ್ರಗಳಲ್ಲಿ ವಿಶಿಷ್ಠ ರಿತೀಯ ಸಾಧನೆಗಳನ್ನು ಮಾಡುತ್ತಿರುವ ಇವರನ್ನು ಕಂಡರೆ ನಮಗೆಲ್ಲಾ ಅಪಾರ ಅಭಿಮಾನ. ಶಿಕ್ಷಣ, ಆರೋಗ್ಯ, ಕೃಷಿ ಮತ್ತು ಸಹಕಾರ ಕ್ಷೇತ್ರಗಳ ಮೂಲಕ ಸಮಾಜ ಸೇವೆಯನ್ನೇ ಗುರಿಯಾಗಿಸಿಕೊಂಡು ಸಾಮಾಜಿಕ ಅಭಿವೃದ್ಧಿಯ ಹೊಸ ಪ್ರಯತ್ನಮಾಡಿ ನಾಡಿನ ಗಮನ ಸೆಳೆಯುತ್ತಿರುವ ಇವರು ಶಿಸ್ತು, ದಕ್ಷತೆಗೆ ಮತ್ತು ದೂರದೃಷ್ಟಿಗೆ ಹೆಸರುವಾಸಿಯಾದವರು. ಇಂತಹ ಅಭೂತಪೂರ್ವ ವ್ಯಕ್ತಿತ್ವ ಹೊಂದಿದ ಇವರು ಉತ್ತಮ ಆರೋಗ್ಯ ಹಾಗೂ ನೆಮ್ಮದಿಯಿಂದ ಶತಾಯುಷಿಗಳಾಗಿ ತಮ್ಮ ಅನುಪಮ ಸೇವೆಯಿಂದ ನಾಡನ್ನು ಸಮೃದ್ಧಿಗೊಳಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ !

ಪ್ರೋ. ಬಾಬಾಸಾಹೇಬ ಆರ್. ಕಾಮನಗೋಳ
ಸಹ ಪ್ರಾಧ್ಯಾಪಕರು
ಡಾ॥ ಬಾಬಾಸಾಹೇಬ ಅಂಬೇಡ್ಕರ (ಬಿ.ಇಡಿ.)
ಶಿಕ್ಷಣ ಮಹಾವಿದ್ಯಾಲಯ, ನಣದಿ

# ಫೆಬ್ರುವರಿ 4 ವಿಶ್ವ ಕ್ಯಾನ್ಸರ್ ದಿನ

ಫೆಬ್ರುವರಿ 4 ವಿಶ್ವ ಕ್ಯಾನ್ಸರ್ ದಿನವನ್ನಾಗಿ ಆಚರಿಸಲಾಗುತ್ತದೆ. ಇದು ಜಾಗೃತಿ ಮತ್ತು ರೋಗದ ಚಿಕಿತ್ಸೆಯನ್ನು ಉತ್ತೇಜಿಸುವ ಗುರಿಯನ್ನು ಹೊಂದಿರುವ ಅಂತರರಾಷ್ಟ್ರೀಯ ಕಾರ್ಯಕ್ರಮವಾಗಿದೆ. ಜಾಗತಿಕವಾಗಿ ಸಾವುಗಳಿಗೆ ಪ್ರಮುಖ ಕಾರಣವಾಗಿರುವ ಕ್ಯಾನ್ಸರ್‌ನ ಪರಿಣಾಮವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಕೆಲಸ ಮಾಡಲು ಸರ್ಕಾರಗಳು, ಆರೋಗ್ಯ ವೃತ್ತಿಪರರು ಮತ್ತು ಸಾರ್ವಜನಿಕರು ಸೇರಿದಂತೆ ವಿವಿಧ ಪಾಲುದಾರರನ್ನು ಒಟ್ಟುಗೂಡಿಸುವ ಗುರಿಯನ್ನು ಇದು ಹೊಂದಿದೆ.

ಆದಾಗ್ಯೂ, ಜೀವನಶೈಲಿಯ ಬದಲಾವಣೆಗಳು, ನಿಯಮಿತ ತಪಾಸಣೆ ಮತ್ತು ಆರಂಭಿಕ ಪತ್ತೆ ಮತ್ತು ಚಿಕಿತ್ಸೆಯ ಮೂಲಕ ಪ್ರಪಂಚದಾದ್ಯಂತ ಈ ಸಾವುಗಳಲ್ಲಿ 40 ಪ್ರತಿಶತಕ್ಕಿಂತಲೂ ಹೆಚ್ಚು ತಡೆಗಟ್ಟಬಹುದು. ಈ ದಿನ ಕ್ಯಾನ್ಸರ್ ರೋಗಿಗಳು ಮತ್ತು ಬದುಕುಳಿದವರ ಜೀವನದ ಸುಧಾರಣೆಯಲ್ಲಿ ಪ್ರಭಾವ ಬೀರಲು ಅವಕಾಶವನ್ನು ನೀಡುತ್ತದೆ.

### ವಿಶ್ವ ಕ್ಯಾನ್ಸರ್ ದಿನ 2023: ಥೀಮ್

ಮೂರು ವರ್ಷಗಳವರೆಗೆ – 2022, 2023 ಮತ್ತು 2024 – ವಿಶ್ವ ಕ್ಯಾನ್ಸರ್ ದಿನದ ಥೀಮ್ ಅನ್ನು "ಕ್ಲೋಸ್ ದಿ ಕೇರ್ ಗ್ಯಾಪ್" ಎಂದು ನಿರ್ಧರಿಸಲಾಗಿದೆ. ಈ ಬಹು-ವರ್ಷದ ಅಭಿಯಾನ ಜಗತ್ತಿನಾದ್ಯಂತ ಕ್ಯಾನ್ಸರ್ ಆರೈಕೆಯಲ್ಲಿನ ಅಸಮಾನತೆಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಗುರುತಿಸುವುದಾಗಿದೆ.

### ವಿಶ್ವ ಕ್ಯಾನ್ಸರ್ ದಿನ 2023: ಮಹತ್ವ

ಜಾಗೃತಿ ಮೂಡಿಸುವುದು ಮತ್ತು ರೋಗಕ್ಕೆ ಸಂಬಂಧಿಸಿದ ಸಾಮಾಜಿಕ ಕಳಂಕವನ್ನು ಕಡಿಮೆ ಮಾಡುವುದು ದಿನದ ಮುಖ್ಯ ಗುರಿಯಾಗಿದೆ. ಶ್ವಾಸಕೋಶ, ಸ್ತನ, ಗರ್ಭಕಂಠ, ತಲೆ ಮತ್ತು ಕುತ್ತಿಗೆ ಮತ್ತು ಕೊಲೊರೆಕ್ಟಲ್ ಕ್ಯಾನ್ಸರ್ (CRC) ಭಾರತೀಯ ಜನಸಂಖ್ಯೆಯ ಮೇಲೆ ಪರಿಣಾಮ ಬೀರುವ ಪ್ರಮುಖ ಕ್ಯಾನ್ಸರ್‌ಗಳಾಗಿವೆ. ವಿಶ್ವ ಕ್ಯಾನ್ಸರ್ ದಿನದಂದು, ಪ್ರತಿಯೊಬ್ಬರೂ ಕ್ಯಾನ್ಸರ್ ಮುಕ್ತ ಆರೋಗ್ಯಕರ ಜಗತ್ತನ್ನು ಹೊಂದಲು ಒಟ್ಟಾಗಿ ನಿಲ್ಲಬೇಕಿದೆ. ಇಂದು ಹಲವಾರು ಕಾರ್ಯಕ್ರಮಗಳನ್ನು ಯೋಜಿಸಲಾಗಿದೆ. ಕಾರ್ಯಕ್ರಮಗಳಲ್ಲಿ ಕ್ಯಾನ್ಸರ್ ಮತ್ತು ಅದರ ಆರಂಭಿಕ ಪತ್ತೆ, ಚಿಕಿತ್ಸೆ ಮತ್ತು ಹೆಚ್ಚಿನದನ್ನು ಜನರಿಗೆ ತಿಳಿಸಲು ಮತ್ತು ಅರಿವು ಮೂಡಿಸಲಾಗುತ್ತದೆ.

### ವಿಶ್ವ ಕ್ಯಾನ್ಸರ್ ದಿನ 2023: ಉಲ್ಲೇಖಗಳು

* "ಕ್ಯಾನ್ಸರ್‌ಗೆ ಹೇಳುವ ನನ್ನ ಮಾತು, 'ನೀನು ನನ್ನ ದೇಹವನ್ನು ಆಕ್ರಮಿಸಲು ಪ್ರಯತ್ನಿಸುತ್ತಿರುವೆ; ನೀನು ನನ್ನನ್ನು ನನ್ನ ಕುಟುಂಬದಿಂದ ದೂರವಿಡಲು ಪ್ರಯತ್ನಿಸುತ್ತಿರುವೆ, ಆದರೆ ನಾನು ನಿನಗಿಂತ ಬಲಶಾಲಿ ಮತ್ತು ನಾನು ಗಟ್ಟಿಯಾಗಿ ನಿಂತು ನಿನ್ನ ವಿರುದ್ಧ ಹೋರಾಡಲಿದ್ದೇನೆ" –ಸ್ಟುವರ್ಟ್ ಸ್ಕಾಟ್
* "ಕ್ಯಾನ್ಸರ್ ನನ್ನ ಎಲ್ಲಾ ದೈಹಿಕ ಸಾಮರ್ಥ್ಯಗಳನ್ನು ಕಸಿದುಕೊಳ್ಳಬಹುದು. ಆದರೆ ಅದು ನನ್ನ ಮನಸ್ಸನ್ನು ಮುಟ್ಟಲು ಸಾಧ್ಯವಿಲ್ಲ. ಅದು ನನ್ನ ಹೃದಯವನ್ನು ಮುಟ್ಟಲು ಸಾಧ್ಯವಿಲ್ಲ ಮತ್ತು ಅದು ನನ್ನ ಆತ್ಮವನ್ನು ಮುಟ್ಟಲು ಸಾಧ್ಯವಿಲ್ಲ." – ಜಿಮ್ ವಾಲ್ವಾನೋ
* "ಕ್ಯಾನ್ಸರ್ ಅನೇಕ ಬಾಗಿಲುಗಳನ್ನು ತೆರೆಯುತ್ತದೆ. ಅದರಲ್ಲಿ ಪ್ರಮುಖವಾದದ್ದು ನಿಮ್ಮ ಹೃದಯ." – ಗ್ರೆಗ್ ಆಂಡರ್ಸನ್
* ಕ್ಯಾನ್ಸರ್ ಒಂದು ಮ್ಯಾರಥಾನ್ ಆಗಿದೆ. ಅದರೊಂದಿಗೆ ನೀವು ಗೆಲ್ಲಿ. ಅದು ನಿಮ್ಮನ್ನು ಗೆಲ್ಲಲು ಬಿಡಬೇಕು. ಉಸಿರಾಡುವಂತೆ ಅದು ನಿಮ್ಮ ದೇಹದಿಂದ ದೂರವಾಗುವಂತೆ ನೋಡಿಕೊಳ್ಳಿ" – ಸಾರಾ ಬೆಟ್ಜ್ ಬುಸಿಯೆರೊ

### ಸರಳ ಜೀವನಶೈಲಿ ಬದಲಾವಣೆಗಳು

ಎಲ್ಲಾ ರೂಪಗಳಲ್ಲಿ ತಂಬಾಕಿಗೆ ಒಡ್ಡಿಕೊಳ್ಳುವುದನ್ನು ತಪ್ಪಿಸುವುದರಿಂದ ಬಾಯಿಯ ಕುಹರ, ಶ್ವಾಸಕೋಶಗಳು, ಜಠರಗರುಳಿನ ಪ್ರದೇಶ, ಇತ್ಯಾದಿಗಳ ಕ್ಯಾನ್ಸರ್ ಬೆಳವಣಿಗೆಯಿಂದ ನಿಮ್ಮನ್ನು ತ್ವರಿತವಾಗಿ ದೂರವಿಡಬಹುದು. ತಂಬಾಕನ್ನು ಸಾಮಾನ್ಯವಾಗಿ ಸಿಗರೇಟ್‌ಗಳಲ್ಲಿ ಬಳಸಲಾಗುತ್ತದೆ. ಅದನ್ನು ಇತರ ರಾಸಾಯನಿಕಗಳೊಂದಿಗೆ ಸಂಯೋಜಿಸಲಾಗುತ್ತದೆ. ಇದು ಕಾಲಾನಂತರದಲ್ಲಿ ಜೀವಕೋಶವನ್ನು ಹಾನಿಗೊಳಿಸುತ್ತದೆ. ಹೀಗಾಗಿ ತಂಬಾಕು ಸೇವನೆಯಿಂದ ದೂರವಿರುವುದರಿಂದ ಕ್ಯಾನ್ಸರ್ ತಡೆಗಟ್ಟಬಹುದು.

ದೇಹದ ತೂಕವನ್ನು ಹೆಚ್ಚಾಗದಂತೆ ನೋಡಿಕೊಳ್ಳುವುದು. ಸ್ಥೂಲಕಾಯದ ವ್ಯಕ್ತಿಗೆ ಕ್ಯಾನ್ಸರ್ ಬರುವ ಅಪಾಯ ಹೆಚ್ಚು. ಸ್ಥೂಲಕಾಯದ ಮಹಿಳೆಯರು ವಿಶೇಷವಾಗಿ ಸ್ತನ ಕ್ಯಾನ್ಸರ್‌ಗೆ ಗುರಿಯಾಗುತ್ತಾರೆ. ಆರೋಗ್ಯಕರ ಆಹಾರ ಸೇವನೆಯು ದೇಹಕ್ಕೆ ಹೆಚ್ಚು ಪ್ರಯೋಜನಕಾರಿಯಾಗಿದೆ. ದೇಹದ ತೂಕವನ್ನು ಕಡಿಮೆ ಮಾಡಲು ನಿಯಮಿತ ವ್ಯಾಯಾಮವನ್ನು ರೂಢಿಸಿಕೊಳ್ಳಿ.

ಸೂರ್ಯನಿಂದ ಬರುವ ನೇರಳಾತೀತ ವಿಕಿರಣವು ಚರ್ಮದ ಕ್ಯಾನ್ಸರ್‌ಗೆ ದೊಡ್ಡ ಕಾರಣಗಳಲ್ಲಿ ಒಂದಾಗಿದೆ. ಸೂರ್ಯನ ಬೆಳಕಿನಲ್ಲಿರುವ ಯುವಿ ಕಿರಣಗಳು ಡಿಎನ್‌ಎ ಹಾನಿಯನ್ನು ಉಂಟುಮಾಡಬಹುದು ಮತ್ತು ಕ್ಯಾನ್ಸರಗೆ ಕಾರಣವಾಗಬಹುದು. ಅಲ್ಲದೆ, ಸೂರ್ಯನ ಬೆಳಕಿಗೆ ಅತಿಯಾಗಿ ಒಡ್ಡಿಕೊಳ್ಳುವುದರಿಂದ ಸನ್ ಬರ್ನ್ಸ್ ಮತ್ತು ತೀವ್ರ ನಿರ್ಜಲೀಕರಣಕ್ಕೆ ಕಾರಣವಾಗಬಹುದು. ಆದ್ದರಿಂದ, ಸೂರ್ಯನ ಹಾನಿಕಾರಕ ವಿಕಿರಣಗಳಿಂದ ನಿಮ್ಮನ್ನು ರಕ್ಷಿಸಿಕೊಳ್ಳಲು ರಕ್ಷಣಾತ್ಮಕ ಟೋಪಿಗಳು, ಉದ್ದನೆಯ ತೋಳುಗಳು ಮತ್ತು ಸನ್‌ಸ್ಕ್ರೀನ್ ಉತ್ಪನ್ನಗಳನ್ನು ಬಳಸಿ.

# ಸಿ.ಬಿ.ಎಸ್.ಇ ಶಾಲೆಗಳ ಶಿಕ್ಷಕರಿಗೆ ಸಿಬಿಪಿ ಕಾರ್ಯಾಗಾರ



ಕೇಂದ್ರಿಯ ಮಾಧ್ಯಮಿಕ ಶಿಕ್ಷಾ ಬೋರ್ಡ್‌ನ ಉತ್ಕೃಷ್ಟತಾ ಕೇಂದ್ರ ಬೆಂಗಳೂರು ನಿರ್ದೇಶನದನದ ಮೇರೆಗೆ ಶಿವಶಂಕರ ಜೊಲ್ಲೆ ಇಂಗ್ಲೀಷ್ ಮೀಡಿಯಮ್ ಪಬ್ಲಿಕ್ ಶಾಲೆ ನಣದಿಯಲ್ಲಿ ಸಿ.ಬಿ.ಎಸ್.ಇ ಶಾಲೆಗಳ ಶಿಕ್ಷಕರಿಗಾಗಿ ಎರಡು ದಿನದ ಸಿಬಿಪಿ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

ರಾಜ್ಯದ ವಿವಿಧ ಸಿ.ಬಿ.ಎಸ್.ಇ ಶಾಲೆಗಳಿಂದ 74 ಜನ ಶಿಕ್ಷಕರು ತರಬೇತಿ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ರವಿಶಂಕರ ವಿದ್ಯಾ ಮಂದಿರ ಬೆಂಗಳೂರು ಸೌಥ್ ಪ್ರಾಚಾರ್ಯರಾದ ಬಿ. ಗಾಯತ್ರಿ ಹಾಗೂ ಶ್ರೀನಿವಾಸ ಸ್ಕೂಲ್ಸ್ ಮೂಡಲಗಿಯ ಪ್ರಾಚಾರ್ಯರಾದ ಮನೋಜ ಭಾಟ್ ಅವರು ಆಗಮಿಸಿದ್ದರು.

ಶೈಕ್ಷಣಿಕ ವರ್ಷದುದ್ದಕ್ಕೂ ಶಾಲೆಯಲ್ಲಿ ಹಮ್ಮಿಕೊಳ್ಳುವ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳ ಮೌಲ್ಯಮಾಪನ ಮಾಡುವ ವಿಧಾನ, ಪ್ರಶ್ನೆಪತ್ರಿಕೆಗಳ ಸ್ವರೂಪ, ನೀಲನಕ್ಷೆ, ಮಲ್ಟಿಪಲ್ ಅಸ್ಸೆಸಮೆಂಟ್, ಆರ್ಟ್‌ಇಂಟಿಗ್ರೇಷನ್, ಪೋರ್ಟ್‌ಪೋಲಿಯೋ, ವಿವಿಧ ಪರೀಕ್ಷೆಗಳನ್ನು ನಡೆಸುವ ವಿಧಾನ, ಬೋಧನಾ ಕೌಶಲಗಳ ಕುರಿತು ಸುದೀರ್ಘವಾಗಿ ಸಮಾಲೋಚನೆ ನಡೆಸಿದರು.

ದೃಶ್ಯ ಮಾಧ್ಯಮದ ಮೂಲಕ ಶಿಕ್ಷಕರಿಗೆ ಮನದಟ್ಟಾಗುವಂತೆ ಪ್ರಾತ್ಯಕ್ಷಿಕೆಗಳ ಮೂಲಕ ಮನದಟ್ಟುಮಾಡಿದರು. ಕಾರ್ಯಾಗಾರದಲ್ಲಿ ಸಂಯೋಜನಾಧಿಕಾರಿಗಳಾದ ಲಕ್ಷ್ಮಣ ಮಾಳಿ, ಪ್ರಾಚಾರ್ಯರಾದ ಗೀತಾ ನಾಯ್ಡು, ಉರ್ಮಿಳಾ ಚೌಗಲೆ, ರಮಜಾನ್ ಧಪೇದಾರ, ಸಪನಾ ವಾಳಕೆ ಪಾಲ್ಗೊಂಡಿದ್ದರು.

# ವಿದ್ಯಾರ್ಥಿಗಳ ಪದಗ್ರಹಣ ಸಮಾರಂಭ




ಜೊಲ್ಲೆ ಗ್ರೂಪ್‌ನ ಶಿವಶಂಕರ ಜೊಲ್ಲೆ ಇಂಗ್ಲೀಷ್ ಮೀಡಿಯಮ್ ಪಬ್ಲಿಕ್ ಶಾಲೆ, (ಸಿ.ಬಿ.ಎಸ್.ಇ) ನಣದಿ ಕ್ಯಾಂಪಸ್‌ನಲ್ಲಿ ಸನ್ 2023–24ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿಗಳ ಪದಗ್ರಹಣ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಪ್ರಾಚಾರ್ಯರಾದ ಗೀತಾ ನಾಯ್ಡು ಅವರು ದೀಪ ಪ್ರಜ್ವಲನೆಯನ್ನು ಮಾಡುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಿ ಮಾತನಾಡುತ್ತ, "ವಿದ್ಯಾರ್ಥಿ ನಾಯಕರು ಉತ್ತಮ ನಾಯಕತ್ವದ ಗುಣಗಳನ್ನು ಅಳವಡಿಸಿಕೊಳ್ಳಬೇಕು. ಶಿಸ್ತು, ಸಮಯಪಾಲನೆ, ಸಮರ್ಪಣೆ, ಶ್ರದ್ಧೆ, ಪ್ರಾಮಾಣಿಕತೆ, ಅಭಿಮಾನಗಳಂತಹ ಆದರ್ಶ ಮನೋಭಾವನೆಗಳನ್ನು ಬೆಳೆಸಿಕೊಳ್ಳಬೇಕು. ಯಾವುದೇ ರೀತಿಯ ಭೇದ ಭಾವಗಳಿಗೆ ಅವಕಾಶಗಳನ್ನು ನೀಡದೆ ಉತ್ತಮ ನಿರ್ಣಯ ತಗೆದುಕೊಳ್ಳುವ ಹಾಗೂ ಯಾವಾಗಲೂ ಧನಾತ್ಮಕ ಆಲೋಚನೆಗಳನ್ನು ಮೈಗೂಡಿಸಿಕೊಳ್ಳಬೇಕು. ತಮ್ಮ ಜವಾಬ್ದಾರಿಗಳನ್ನು ಪ್ರಾಮಾಣಿಕವಾಗಿ ನಿಭಾಯಿಸಿ ಶಾಲೆಯ ಕೀರ್ತಿಯನ್ನು ಹೆಚ್ಚಿಸುವ ದಿಸೆಯಲ್ಲಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು. ಉತ್ತಮ ಸಂವಹನ ಕೌಶಲಗಳನ್ನು ಹೊಂದಿ ಎಲ್ಲ ವಿದ್ಯಾರ್ಥಿಗಳ ಮಧ್ಯದಲ್ಲಿ ಅಂತರ್ ಕ್ರಿಯೆಗಳನ್ನು ಹೆಚ್ಚಿಸಿ,. ಎಲ್ಲರಿಗೂ ಪ್ರೇರಣೆಯನ್ನು ನೀಡುವ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವಂತೆ ಕರೆ ನೀಡಿದರು."

ಸ್ಕೂಲ್ ಹೆಡ್ ಬಾಯ್ ಆಗಿ ಅಜಿಂಕ್ಯಾ ಐದಮಾಳೆ ಹಾಗೂ ಸ್ಕೂಲ್ ಹೆಡ್ ಗರ್ಲ್ ಆಗಿ ಭೂಮಿಕಾ ಠೋಂಬರೆ ಹಾಗೂ ಒಟ್ಟು 39 ವಿದ್ಯಾರ್ಥಿಗಳು ಜವಾಬ್ದಾರಿಗಳನ್ನು ವಹಿಸಿಕೊಂಡರು. ಶಾಲಾ ಸಂಸತ್ತಿನ ಸಂಯೋಜಕರಾದ ರಾಜು ಪವಾರ ಅವರು ವಿವಿಧ ವಿಭಾಗಗಳ ವಿದ್ಯಾರ್ಥಿ ನಾಯಕರಿಗೆ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು.

ಕಾರ್ಯಕ್ರಮದಲ್ಲಿ ಜೊಲ್ಲೆ ಶಿಕ್ಷಣ ಸಂಸ್ಥೆಯ ಸಮನ್ವಯಾಧಿಕಾರಿಗಳಾದ ಲಕ್ಷ್ಮಣ ಮಾಳಿ, ರಮಜಾನ ದಫೇದಾರ, ಸಿಬಂಧಿ ವರ್ಗ, ಪಾಲಕರು ಹಾಗೂ ಪೋಷಕರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಶಿಕ್ಷಕಿಯಾದ ಮೇನಕಾ ರಾಜಮಾನೆ ಸ್ವಾಗತಿಸಿದರು. ಪೂಜಾ ಕುಲಕರ್ಣಿ ವಂದಿಸಿದರು. ಸಾಗರ ರತ್ನಾಕರ ಹಾಗೂ ಅಶ್ವಿನಿ ಪಾಟೀಲ ಕಾರ್ಯಕ್ರಮ ನಿರೂಪಿಸಿದರು.


ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಯಕ್ಸಂಬಾ





# ಫೆಬ್ರವರಿ 28 ರಾಷ್ಟ್ರೀಯ ವಿಜ್ಞಾನ ದಿನ

### ಏನಿದು ರಾಷ್ಟ್ರೀಯ ವಿಜ್ಞಾನ ದಿನ?

ವಿಜ್ಞಾನ ಜಗತ್ತಿನಲ್ಲಿ ಭಾರತವನ್ನು ಮೇರು ಶಿಖರಕ್ಕೆ ಕೊಂಡೊಯ್ದ ಸರ್ ಸಿ.ವಿ.ರಾಮನ್ ಅವರ ಅಪೂರ್ವ ಸಾಧನೆಗಳ ನೆನಪಿನಲ್ಲಿ ರಾಷ್ಟ್ರೀಯ ವಿಜ್ಞಾನ ದಿನವನ್ನು ಆಚರಿಸಲಾಗುತ್ತದೆ. ರಾಮನ್ ಅವರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಸಭಾಂಗಣದಲ್ಲಿ ಕ್ರಿ.ಶ.1928ರ ಫೆಬ್ರವರಿ 28ರಂದು ಬೆಳಕಿನ ಚದುರಿವಿಕೆಯಲ್ಲಿ ಸಾಮಗ್ರಿಗಳ ಗುಣಲಕ್ಷಣಗಳ ಪರಿಣಾಮದ ಬಗ್ಗೆ ಹೊಸ ಹೊಳಹೊಂದನ್ನು ಪ್ರತಿಪಾದಿಸಿದ ದಿನ. ಮುಂದಿನ ದಿನಗಳಲ್ಲಿ ಅದು ರಾಮನ್ ಪರಿಣಾಮವೆಂದೇ ಪ್ರಸಿದ್ಧವಾಯಿತು. ಈ ಹಿನ್ನೆಲೆಯಲ್ಲಿ 1987 ಫೆಬ್ರವರಿ 28ರಂದು ದೇಶಾದ್ಯಂತ ರಾಷ್ಟ್ರೀಯ ವಿಜ್ಞಾನ ದಿನವನ್ನು ಆಚರಿಸಲಾಗುತ್ತಿದೆ.

### ರಾಷ್ಟ್ರೀಯ ವಿಜ್ಞಾನ ದಿನದ ಥೀಮ್

ಪ್ರತಿವರ್ಷ ಒಂದೊಂದು ಘೋಷವಾಕ್ಯದಡಿ ರಾಷ್ಟ್ರೀಯ ವಿಜ್ಞಾನ ದಿನವನ್ನು ಆಚರಿಸಲಾಗುತ್ತದೆ. ಈ ಬಾರಿ ಜಾಗತಿಕ ಸೌಖ್ಯಕ್ಕಾಗಿ ಜಾಗತಿಕ ವಿಜ್ಞಾನ ಎಂಬ ಘೋಷವಾಕ್ಯವಿದೆ. ಅಂದರೆ, Global Science for Global Wellbeing ಎಂಬ ಥೀಮ್‌ನಡಿ ಈ ದಿನವನ್ನು ಆಚರಿಸಲಾಗುತ್ತದೆ.

### ಆಚರಣೆಯ ಉದ್ದೇಶ

ವಿಜ್ಞಾನ ಹಾಗೂ ನಮ್ಮ ಜೀವನದಲ್ಲಿ ಅದರ ಮಹತ್ವದ ಬಗ್ಗೆ ಜನಸಾಮಾನ್ಯರಲ್ಲಿ ಅರಿವು ಮೂಡಿಸುವುದು ರಾಷ್ಟ್ರೀಯ ವಿಜ್ಞಾನ ದಿನ ಆಚರಣೆಯ ಉದ್ದೇಶ. ರಾಷ್ಟ್ರೀಯ ವಿಜ್ಞಾನ ದಿನ ಆಚರಣೆಯ ಉದ್ದೇಶ, ಉಪನ್ಯಾಸಗಳು, ಚರ್ಚಾಸ್ಪರ್ಧೆಗಳು, ರಸಪ್ರಶ್ನೆ, ವಸ್ತುಪ್ರದರ್ಶನ ಹೀಗೆ ನಾನಾ ಚಟುವಟಿಕೆಗಳನ್ನು ದೇಶದ ವಿವಿಧೆಡೆ ಹಮ್ಮಿಕೊಳ್ಳಲಾಗುತ್ತದೆ. ಪ್ರತೀ ವರ್ಷ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಚಟುವಟಿಕೆಗಳನ್ನು ಒಂದು ನಿರ್ದಿಷ್ಟ ವಿಷಯದ ಸುತ್ತ ಆಯೋಜಿಸಲಾಗುತ್ತದೆ.

### ಸಿವಿ ರಾಮನ್ ಬಗ್ಗೆ ಗೊತ್ತೆ?


ವಿಜ್ಞಾನದಲ್ಲಿ ನೊಬೆಲ್ ಪ್ರಶಸ್ತಿ ಪಡೆದ ಏಷ್ಯದ ಮೊತ್ತಮೊದಲ ವಿಜ್ಞಾನ ಎಂಬ ಹೆಗ್ಗಳಿಕೆಗೆ ಪಾತ್ರರಾದ ಸಿ.ವಿ. ರಾಮನ್ ಅವರ ಪೂರ್ಣ ಹೆಸರು ಚಂದ್ರಶೇಖರ ವೆಂಕಟರಾಮನ್. ಜನಿಸಿದ್ದು ತಮಿಳುನಾಡಿನ ತಿರುಚಿನಾಪಳ್ಳಿಯಲ್ಲಿ 1888ರ ನವೆಂಬರ್ 7ರಂದು . ಅವರ ತಂದೆ ಚಂದ್ರಶೇಖರ್ ಅಯ್ಯರ್ ಗಣಿತ ಹಾಗೂ ಭೌತವಿಜ್ಞಾನದ ಶಿಕ್ಷಕರಾಗಿದ್ದರು. ರಾಮನ್ ಅವರು ಕಲ್ಕತಾ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿ, ಮುಂದೆ ಇಂಡಿಯನ್ ಇನ್ಸಿಟಿಟ್ಯೂಟ್ ಆಫ್ ಸೈನ್ಸ್ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ.

### ರಾಮನ್ ಪರಿಣಾಮ

ಒಮ್ಮೆ ಹಡಗಿನಲ್ಲಿ ಪ್ರಯಾಣಿಸುವಾಗ ರಾಮನ್ ಅವರಿಗೆ ಸಮುದ್ರ ಏಕೆ ಯಾವಾಗಲೂ ನೀಲಿಯಾಗಿಯೇ ಕಾಣುತ್ತದೆ ಎಂಬ ಪ್ರಶ್ನೆ ಎದುರಾಯಿತಂತೆ. ಅದು ಆಕಾಶದ ಬಣ್ಣದ ಪ್ರತಿಫಲನವೋ ಅಥವಾ ಈ ನೀಲಿ ಬಣ್ಣದ ಹಿಂದೆ ಬೇರೇನಾದರೂ ಗುಟ್ಟು ಅಡಗಿದೆಯೋ ಎಂದು ಪತ್ತೆಮಾಡಲು ಹೊರಟ ರಾಮನ್ ಸೂರ್ಯನ ಬೆಳಕು ನೀರಿನಲ್ಲಿ ಚದುರಿಹೋಗುವುದೇ ಸಮುದ್ರದ ನೀರು ನೀಲಿಯಾಗಿ ಕಾಣಲು ಕಾರಣ ಎಂಬ ವಿಷಯವನ್ನು ಕಂಡುಹಿಡಿದರು. ಇದೇ ಅಂಶ ಮುಂದೆ ಅವರು ತಮ್ಮ ಅಧ್ಯಯನವನ್ನು ಮುಂದುವರೆಸಲು ಪ್ರೇರಣೆಯಾಯಿತು.

ಕೋಲ್ಕತಾದ ಇಂಡಿಯನ್ ಅಸೋಸಿಯೇಷನ್ ಫಾರ್ ಕಲ್ಟಿವೇಷನ್ ಆಫ್ ಸೈನ್ಸ್‌ನಲ್ಲಿ ರಾಮನ್ ಅವರು ತಮ್ಮ ಸಹೋದ್ಯೋಗಿಗಳೊಡನೆ ನಡೆಸಿದ ಅಧ್ಯಯನಗಳ ಪರಿಣಾಮವೇ ರಾಮನ್ ಪರಿಣಾಮದ ಶೋಧ. ಇದೇ ಸಾಧನೆಗಾಗಿ ಅವರಿಗೆ 1930ನೇ ಇಸವಿಯಲ್ಲಿ ನೊಬೆಲ್ ಪುರಸ್ಕಾರ ನೀಡಿ ಗೌರವಿಸಲಾಯಿತು. ಇದು ವಿಜ್ಞಾನ ಕ್ಷೇತ್ರದಲ್ಲಿ ಭಾರತ ಗೆದ್ದ ಮೊದಲ ನೊಬೆಲ್ ಪ್ರಶಸ್ತಿಯೂ ಇದಾಗಿದೆ.

ಯಾವುದೇ ಪಾರದರ್ಶಕ ರಾಸಾಯನಿಕ ವಸ್ತುವಿನ ಮೂಲಕ ಬೆಳಕನ್ನು ಹಾಯಿಸಿದಾಗ ಅದರಿಂದ ಹೊರಬರುವ ಕಿರಣಗಳು ಒಳಬರುವ ಕಿರಣಗಳಿಗಿಂತ ಭಿನ್ನವಾದ ದಿಕ್ಕಿನತ್ತ ಹೊರಳಿರುವುದನ್ನು ನಾವು ನೋಡಬಹುದು. ಹೀಗೆ ಚದುರಿದ ಬಹುಪಾಲು ಕಿರಣಗಳ ಸ್ವರೂಪ ಮೂಲ ಕಿರಣದಂತೆಯೇ ಇರುತ್ತದಾದರೂ ಒಂದಷ್ಟು ಭಾಗದ ಕಿರಣಗಳ ತರಂಗಾಂತರ ಮೂಲಕ್ಕಿಂತ ಬದಲಾಗಿರುತ್ತದೆ. ಇದನ್ನೇ ರಾಮನ್ ಪರಿಣಾಮವೆಂದು ಕರೆಯುತ್ತಾರೆ.



**ಮನವಿ ಸಲ್ಲಿಸುತ್ತಿರುವುದು**

ನವದೆಹಲಿಯಲ್ಲಿ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವರಾದ ಶ್ರೀ ನಿತಿನ್ ಗಡ್ಕರಿ ಅವರನ್ನು ಚಿಕ್ಕೋಡಿ ಲೋಕಸಭೆ ಸಂಸದರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಯವರು ಭೇಟಿಯಾಗಿ, ಚಿಕ್ಕೋಡಿಯಿಂದ ಗೋಟೂರುವರೆಗೆ ರಸ್ತೆ ನಿರ್ಮಾಣ ಕಾಮಗಾರಿಗೆ ಯೋಜನೆಯನ್ನು ಶೀಘ್ರದಲ್ಲೇ ಕಾರ್ಯಗತಗೊಳಿಸುವಂತೆ ಮನವಿ ಸಲ್ಲಿಸುತ್ತಿರುವ ದೃಶ್ಯ.



**ಸತ್ಕಾರ ಸ್ವಿಕರಿಸುತ್ತಿರುವುದು**

ನಿಪ್ಪಾಣಿಯಲ್ಲಿ ಧಾರವಾಡದ ರಂಗಾಯಣ ಹಾಗೂ ಜೊಲ್ಲೆ ಗ್ರೂಪ್ ವತಿಯಿಂದ ಆಯೋಜಿಸಿದ ವೀರರಾಣಿ ಕಿತ್ತೂರ ಚೆನ್ನಮ್ಮಳ ಇತಿಹಾಸ ಸಾರುವ ಬೃಹತ್ ನಾಟಕದ ಪ್ರದರ್ಶನಕ್ಕೆ ಜೊಲ್ಲೆ ದಂಪತಿ ನಗಾರಿ ಬಾರಿಸುವ ಮೂಲಕ ಚಾಲನೆ ನೀಡಿ ಸತ್ಕಾರ ಸ್ವಿಕರಿಸುತ್ತಿರುವುದು.




**ಸತ್ಕರಿಸುತ್ತಿರುವುದು**

ಕೊಲ್ಲಾಪುರದ ಕನ್ಹೇರಿ ಸಿದ್ದಗಿರಿ ಮಠದಲ್ಲಿ ಕಣ್ಹೇರಿ ಮಠದ ಜಗದ್ಗುರು ಪರಮಪೂಜ್ಯ ಶ್ರೀ ಕಾಡಸಿದ್ದೇಶ್ವರ ಸ್ವಾಮೀಜಿಗಳ ದಿವ್ಯ ಸಾನಿಧ್ಯದಲ್ಲಿ ಜರುಗಿದ ಪಂಚಮಹಾಭೂತ ಲೋಕೋತ್ಸವದ ಕಾರ್ಯಕ್ರಮದ ಜಲ ತತ್ವ ಸಂಕೀರ್ಣ ಹಾಗೂ ಮಹಿಳಾ ಉತ್ಸವದಲ್ಲಿ ಭಾಗವಹಿಸಿ ಸತ್ಕರಿಸುತ್ತಿರುವುದು.



**ಚಾಲನೆ ನೀಡುತ್ತಿರುವುದ**

ಹಾವೇರಿ ಜಿಲ್ಲೆಯ ಕೆರಿಮತ್ತಿಹಳ್ಳಿ ಗ್ರಾಮದ ಕೆಓಎಫ್ ಕೃಷಿ ಅಭಿವೃದ್ಧಿ ಮತ್ತು ತರಬೇತಿ ಕೇಂದ್ರದಲ್ಲಿ ಬೀಜೋತ್ಪಾದನೆಯ ಮೊದಲ ಕೊಯ್ಲು ಆರಂಭಕ್ಕೆ ಚಿಕ್ಕೋಡಿ ಲೋಕಸಭೆ ಸಂಸದರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಚಾಲನೆ ನೀಡುತ್ತಿರುವುದು.



**ಚಾಲನೆ ನೀಡುತ್ತಿರುವುದು**

ಮೂಡಬಿದರೆಯಲ್ಲಿ ಜರುಗಿದ ಅಂತರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಹಾಗೂ ರಾಜ್ಯಪಾಲರಿಂದ ಪುರಸ್ಕಾರ ಪಡೆದ ನಮ್ಮ ತಾಲೂಕಿನ ಸ್ಕೌಟ್ಸ್ & ಗೈಡ್ಸ್ ವಿದ್ಯಾರ್ಥಿಗಳು ಹಾಗೂ ಶಿಕ್ಷಕರ ಅಭಿನಂದನಾ ಸಮಾರಂಭಕ್ಕೆ ಕರ್ನಾಟಕ ರಾಜ್ಯ ಸಚಿವರಾದ ಸೌ. ಶಶಿಕಲಾ ಜೊಲ್ಲೆ ಚಾಲನೆ ನೀಡುತ್ತಿರುವುದು.



**ಉಚಿತ ಗ್ಯಾಸ ವಿತರಣೆ**

ಸೌಂದಲಗಾ ಗ್ರಾಮದಲ್ಲಿ ಮುಜರಾಯಿ, ಹಜ ಮತ್ತು ವಕ್ಫ್ ಇಲಾಖೆಯ ಸಚಿವರಾದ ಸೌ. ಶಶಿಕಲಾ ಜೊಲ್ಲೆ ಯವರು ಪ್ರಧಾನಮಂತ್ರಿಗಳ ಉಜ್ವಲಾ ಯೋಜನೆಯಡಿ ಫಲಾನುಭವಿಗಳಿಗೆ ಉಚಿತ ಗ್ಯಾಸ್ ವಿತರಿಸುತ್ತಿರುವ ದೃಶ್ಯ .



**396ನೇ ಜಯಂತೋತ್ಸವ**

ನಿಪ್ಪಾಣಿ ನಗರದಲ್ಲಿ, ಛತ್ರಪತಿ ಶಿವಾಜಿ ಮಹಾರಾಜರ 396 ನೇ ಜಯಂತೋತ್ಸವ ನಿಮಿತ್ಯ, ಶಿವಾಜಿ ಮಹಾರಾಜರ ಪ್ರತಿಮೆಗೆ ಮುಜರಾಯಿ, ಹಜ ಮತ್ತು ವಕ್ಫ್ ಇಲಾಖೆಯ ಸಚಿವರಾದ ಸೌ. ಶಶಿಕಲಾ ಜೊಲ್ಲೆ ಯವರು ಮಾಲಾರ್ಪಣೆ ಮಾಡುತ್ತಿರುವ ದೃಶ್ಯ.



**ದರ್ಗಾಕ್ಕೆ ಭೇಟಿ**

ಸದಲಗಾ ಪಟ್ಟಣದ ಖ್ವಾಜಾ ಹಜರತ್ ಶಮನಾಪೀರ ಉರುಸ ನಿಮಿತ್ಯ ದರ್ಗಾಕ್ಕೆ ಬಸವಜ್ಯೋತಿ ಯೂಥ ಫೌಂಡೇಶನ ಅಧ್ಯಕ್ಷರಾದ ಕು. ಬಸವಪ್ರಸಾದ ಜೊಲ್ಲೆ ಯವರು ಭೇಟಿ ನೀಡಿ ಶಮನಾಪೀರ ದರ್ಶನ ಪಡೆಯುತ್ತಿರುವ ದೃಶ್ಯ.

ಜೊಲ್ಲೆ ಉದ್ಯೋಗ ಸಮೂಹ ರಾಣಿ ಚನ್ನಮ್ಮಾ ವೃತ್ತ, ಯಕ್ಸಂಬಾ ತಾ. ಚಿಕ್ಕೋಡಿ ಜಿ. ಬೆಳಗಾವಿ– 591244 Ph : 9844469288 / 7760983792 E-mail : darpanjus6@gmail.com

ಪ್ರಧಾನ ಸಂಪಾದಕರು :– ಸೌ. ಸುಧಾ ಡಿ. ಪಾಟೀಲ, ಉಪನ್ಯಾಸಕರು, ಕನ್ನಡ ವಿಭಾಗ